ಹಳ್ಳಿಖೇಡ್ (ಬಿ) ಮಂಡಲ ಪಂಚಾಯಿತಿಯನ್ನು ಪುರ ಸಭೆಯನ್ನಾಗಿ ಪರಿವರ್ತಿಸುವುದರ ಬಗ್ಗೆ

4785 - ಶ್ರೀ ರಾಜೇಂದ್ರ ವರ್ಮ (ಹುಲಸೂರ್) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಲುಸೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಳ್ಳಿಖೇಡ್ (ಬಿ) ಗ್ರಾಮದ ಮಂಡಲ ಪಂಚಾಯ್ತಿಯು 41 ಸದಸ್ಯರನ್ನು ಹೊಂದಿದ್ದು ರಾಜ್ಯದಲ್ಲಿಯೇ ಅತೀ ದೊಡ್ಡ ಮಂಡಲ ಪಂಚಾಯತಿಯಾಗಿರುವುದು ನಿಜವಲ್ಲವೇ?*

ಆ) *ಹಾಗಿದ್ದಲ್ಲಿ ಈ ಗ್ರಾಮದ ಮಂಡಲ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸಲಾಗಿದೆಯೇ?*

ಇ) *ಮಂಡಲ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು?*

ಈ) *ಹಳ್ಳಿಖೇಡ್ (ಬಿ) ಗ್ರಾಮದಲ್ಲಿ ಬೃಹತ್ ಕೈಗಾರಿಕೆಗಳು, ವಾಣಿಜ್ಯ ಬ್ಯಾಂಕುಗಳು, ಸಕ್ಕರೆ ಕಾರ್ಖಾನೆಯು ಇದ್ದು ಪುರಸಭೆಯನ್ನಾಗಿ ಪರಿವರ್ತಿಸಲು ಎಲ್ಲಾ ಅಗತ್ಯತೆಗಳನ್ನು ಹೊಂದಿರುವುದರಿಂದ ಆಡಳಿತದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಈ ಗ್ರಾಮವನ್ನು ಪುರಸಭೆಯನ್ನಾಗಿ ಪರಿವರ್ತಿಸಲಾಗುವುದೇ?*

ಉ) *ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಹೌದು. ನಿಜ.

ಆ) -ಇಲ್ಲ-

ಇ) ಕರ್ನಾಟಕ ಪುರಸಭೆ ಕಾಯ್ದೆ 1964ರ ನಿಯಮ 3 ರಂತೆ ಈ ಕೆಳಕಂಡ ನಿಬಂಧನೆಗಳು ಪೂರ್ಣಗೊಂಡಿದ್ದಲ್ಲಿ ಈ ಬಗ್ಗೆ ಆಯಾ ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಕಳುಹಿಸಿದ್ದಲ್ಲಿ ಪರಿಗಣಿಸಿ ಪುರಸಭೆಯನ್ನಾಗಿ ಪರಿವರ್ತಿಸಬಹುದು.

1. ಸದರಿ ಪ್ರದೇಶದ ಜನಸಂಖ್ಯೆಯು 20,000ಕ್ಕಿಂತ ಕಡಿಮೆ ಇರಕೂಡದು ಹಾಗೂ 50,000 ಕ್ಕಿಂತ ಹೆಚ್ಚು ಇರಕೂಡದು.
2. ಅಂತಹ ಪ್ರದೇಶದ ಜನಸಾಂದ್ರತೆಯು ಒಂದು ಚದರ ಕಿ.ಮೀ. ವಿಸ್ತೀರ್ಣಕ್ಕೆ ಒಂದು ಸಾವಿರದ ಐನೂರಕ್ಕಿಂತ ಕಡಿಮೆ ಇರತಕ್ಕದ್ದಲ್ಲ.
3. ಸ್ಥಳೀಯ ಆಡಳಿತ ನಿರ್ವಹಣೆಗಾಗಿ ಅಂತಹ ಪ್ರದೇಶಗಳಿಂದ ಹಿಂದಿನ ಜನಗಣತಿಯ ವರ್ಷದಲ್ಲಿ ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲಗಳಿಂದ ಉತ್ಪತ್ತಿಯಾದ

ಆದಾಯವು 9 ಲಕ್ಷ ರೂಗಳಿಗಿಂತ ಕಡಿಮೆ ಇರತಕ್ಕದ್ದಲ್ಲ. ಅಥವಾ ತಲಾ 45 ರೂಗಳಂತೆ, ಆದಾಯವನ್ನು ಲೆಕ್ಕಹಾಕಿದಾಗ ಒದಗಿಬರುವ ಮೊತ್ತವು ಎಷ್ಟಾಗುತ್ತದೋ ಇವೆರಡರಲ್ಲಿ ಹೆಚ್ಚು ಯಾವುದಾಗುವುದೋ, ಆ ಗರಿಷ್ಠ ಆದಾಯವನ್ನು ಪರಿಗಣಿಸತಕ್ಕದ್ದು.

ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ 50 ಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

ಈ) ಕೇಂದ್ರ ಸರ್ಕಾರದ ಜನಗಣತಿ ನಿರ್ದೇಶನಾಲಯವು 2001ನೇ ಸಾಲಿನ ಜನಗಣತಿ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿರುವುದರಿಂದ31-3-2001 ರವರೆಗೆ ಹೊಸದಾಗಿ ಪುರಸಭೆ ರಚಿಸುವ ಬಗ್ಗೆ ನಿರ್ಬಂಧ ಇರುತ್ತದೆ. ದಿನಾಂಕ: 31-3-2001ರ ನಂತರ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆ ಬಂದಲ್ಲಿ ವಿಷಯವನ್ನು ಪರಿಶೀಲಿಸಲಾಗುವುದು.

ಉ) ಮೇಲಿನಂತೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಸ್ಟೆಲ್‌ಗಳ ಸ್ಥಾಪನೆ

4786 - ಶ್ರೀ ರಾಜೇಂದ್ರವರ್ಮ (ಹುಲ್‌ಸೂರ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಬೀದರ್ ಜಿಲ್ಲೆಯಲ್ಲಿ ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ? (ಗ್ರಾಮಾವಾರು ವಿವರಗಳನ್ನು ಒದಗಿಸುವುದು).*

ಆ) *ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ವಿಶೇಷವಾಗಿ ಹುಲಸೂರು ಮತಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಹೊಸದಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿನಿಲಯಗಳನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಪ್ರಸ್ತಾವನೆಯು ಸರ್ಕಾರದ ಪರೀಶಿಲನೆಯಲ್ಲಿ ದೆಯೇ ? ಹಾಗೂ ಸರ್ಕಾರವು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?*

ಇ) *ಕಡ್ಡಾಯವಾಗಿ ಹೋಬಳಿಗಳಲ್ಲಿ ಅಂಬೇಡ್ಕರ್ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೇಲ್ಕಂಡ ವರ್ಗಗಳ ಹಾಸ್ಟೆಲ್‌ಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರಕ್ಕೆ ಬೀದರ್ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಕಳಿದ ಒಂದು ವರ್ಷದ ಅವಧಿಯಲ್ಲಿ ಕಳುಹಿಸಿರುವುದು ನಿಜವೇ ? ಹಾಗಿದ್ದಲ್ಲಿ ಈ ಪ್ರಸ್ತಾವನೆಯ ಬಗ್ಗೆ ಸರ್ಕಾರದ ಕ್ರಮಗಳೇನು ?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಒಟ್ಟು49 ಸರ್ಕಾರಿ ವಿದ್ಯಾರ್ಥಿನಿಲಯಗಳಿವೆ. (ಗ್ರಾಮಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ). ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗಗಳ ಯಾವುದೇ ವಿದ್ಯಾರ್ಥಿನಿಲಯಗಳು ಇರುವುದಿಲ್ಲ.